ಪ್ರಸ್ತಾಪವಿರುತ್ತದೆ. ಯತ್ನಟ್ಟಿ ಬ್ರಿಡ್ಜ್ ಕಂ ಬ್ಯಾರೇಜ್‌ನ ಬದಲಾಗಿ ಬ್ಯಾರೇಜನ್ನು ಹೊಸ ಸೇತುವೆಯ ಜೊತೆಗೆ ನಿರ್ಮಿಸುವ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ ಚರ್ಚಿಸಲಾಯಿತು. ಆದರೆ ಪ್ರಾಧಿಕಾರವು ಈಗಾಗಲೇ ಸೇತುವೆ ಕಾಮಗಾರಿಯನ್ನು ಪ್ರಾರಂಭಿಸಿರುವುದರಿಂದ ಈ ಪ್ರಸ್ತಾವನೆಗೆ ಪ್ರಾಧಿಕಾರವು ಒಪ್ಪಿರುವುದಿಲ್ಲ.

ಯತ್ನಟ್ಟಿ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ ಕಾಮಗಾರಿಯ ಪ್ರಸ್ತಾವನೆ ನೀರಿನ ಲಭ್ಯತೆ ಹಾಗೂ ತಾಂತ್ರಿಕ ಅನುಮೋದನೆಗಾಗಿ ಪರಿಶೀಲನೆಯಲ್ಲಿದೆ. ತಾಂತ್ರಿಕ ಅನುಮೋದನೆ ಪಡೆದು ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ಕೈಗೊಳ್ಳಲು ಕ್ರಮವಹಿಸಲಾಗುವುದು.

ಇ) ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆ ದೊರೆತ ನಂತರ ಕೈಗೆತ್ತಿಕೊಳ್ಳಲಾಗುವುದು.

ನದಿ ಸಂಪರ್ಕ ಹಳ್ಳಗಳಲ್ಲಿ ಹೂಳು ತುಂಬಿರುವುದು

7(20) ಶ್ರೀ ಯು ಟಿ ಖಾದರ್:(ಮಂಗಳೂರು) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಹರಿಯುವ ನದಿಗಳನ್ನು ಸಂಪರ್ಕಿಸುವ ಹಳ್ಳಗಳಲ್ಲಿ ಹೂಳು ತುಂಬಿ ಅತಿವೃಷ್ಟಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಹಳ್ಳಗಳಲ್ಲಿ ತುಂಬಿರುವ ಹೂಳನ್ನು ಎತ್ತಲು ಸರ್ಕಾರವು ಕಾರ್ಯಕ್ರಮಗಳೇನಾದರು ಹಮ್ಮಿಕೊಳ್ಳುವುದೇ

ಶ್ರೀ ಗೋವಿಂದ ಎಂ ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು):

ಅ) ಬಂದಿದೆ.

ಆ) ಅನುದಾನದ ಕೊರತೆಯಿಂದಾಗಿ ಎಲ್ಲಾ ಹಳ್ಳಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. 2009–10ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕಿನ

ಕಂದಾವರ ಗ್ರಾಮದ ಧೂಮಾವತಿ ದೇವಸ್ಥಾನದಿಂದ ಮೂರು ತೋಡು ಮಸೀದಿವರೆಗೆ ದೊಡ್ಡ ತೋಡಿನಿಂದ ಹೂಳೆತ್ತಿ ತಡೆಗೋಡೆ ನಿರ್ಮಿಸುವ ಕಾಮಗಾರಿಯನ್ನು ರೂ.32.50 ಲಕ್ಷಗಳ ಅಂದಾಜು ಮೊತ್ತದಲ್ಲಿ ನಬಾರ್ಡ್ ಆರ್.ಐ.ಡಿ.ಎಫ್.15 ರಡಿ ಕೈಗೆತ್ತಿಕೊಳ್ಳಲಾಗಿದೆ.

ಜಾಗತಿಕ ಬಂಡವಾಳ ಹೂಡಿಕೆ

8(27) ಶ್ರೀ ಜಮೀರ್ ಅಹಮದ್ ಖಾನ್ ಬಿ ಝಡ್:(ಚಾಮರಾಜಪೇಟೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ದಿನಾಂಕ 3 ಮತ್ತು 4ನೇ ಜೂನ್ 2010 ರಂದು ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಕಂಪನಿಗಳಿಗೆ ಅವಶ್ಯಕತೆ ಇರುವ ನೀರಿನ ಪ್ರಮಾಣವನ್ನು ನಿರ್ಧರಿಸಲಾಗಿದೆಯೇ?

ಆ) ನಿರ್ಧರಿಸಿದಲ್ಲಿ, ಅಗತ್ಯವಿರುವ ನೀರನ್ನು ಪೂರೈಸಲು ಸರ್ಕಾರವು ಬೃಹದ್ಯೋಜನೆಯನ್ನು ತಯಾರಿಸಲಾಗಿದೆಯೇ?

ಇ) ತಯಾರಿಸಲಾಗಿದ್ದಲ್ಲಿ ಅದರ ರೂಪರೇಷಗಳೇನು; (ವಿವರಗಳನ್ನು ನೀಡುವುದು)

ಶ್ರೀ ಮುರುಗೇಶ್ ಆರ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು. ಈ ಯೋಜನೆಗಳಿಗೆ ಸುಮಾರು 3338 ಎಂಎಲ್‌ಡಿ (ದಶಲಕ್ಷ ಲೀಟರ್ ಪ್ರತಿ ದಿನ) ನೀರು ಬೇಕಾಗುತ್ತದೆ.

ಆ) & ಇ) ಜಲ ಸಂಪನ್ಮೂಲ ಇಲಾಖೆ ಈ ಸಂಬಂಧ ವರದಿ ಸಲ್ಲಿಸಲು ತಾಂತ್ರಿಕ ಸಮಿತಿಯೊಂದನ್ನು ದಿನಾಂಕ: 10.06.2010, ಆದೇಶ ಸಂಖ್ಯೆ: ಜಸಂಇ 110 ಕೆಬಿಎನ್ 2010, ಮೂಲಕ ರಚಿಸಲಾಗಿದೆ.

9(29) ಶ್ರೀ ಪುಟ್ಟೇಗೌಡ ಸಿ ಎಸ್:(ಶ್ರವಣ ಬೆಳಗೊಳ) [ವಿಧಾನ ಸಭೆಯಿಂದ ಚುನಾಯಿತರಾದವರು] ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?